# ಕನಕದಾಸರ ಕೀರ್ತನೆಗಳಲ್ಲಿ ಸಾಮಾಜಿಕ ಮೌಲ್ಯಗಳು

**ಜಯದೇವ ಸಿರಳ್ಳಿ***

**DOI: https://doi.org/10.5281/zenodo.22300105**

**ABSTRACT**

ಕನಕದಾಸರು ಸಾಮಾಜಿಕ ಚಿಂತನೆ ಮತ್ತು ವೈಚಾರಿಕ ದೃಷ್ಟಿಕೋನದ ಮೂಲಕ ಸಮಾಜವನ್ನು ಕಟ್ಟಲು ಪ್ರಯತ್ನಿಸಿದರು. ಇವರು ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ನೀಡಿದ ಕೊಡುಗೆ ಅಪಾರವಾದುದು. ಕನಕದಾಸರು ತಮ್ಮ ಕೀರ್ತನೆಗಳಲ್ಲಿ ಸಾಮಾಜಿಕ ಮೌಲ್ಯಗಳನ್ನು ಎತ್ತಿ ಹಿಡಿಯುವುದರ ಮೂಲಕ ಸ್ವಸ್ಥ ಸಮಾಜದ ನಿರ್ಮಾಣಕ್ಕಾಗಿ ಶ್ರಮಿಸಿದ್ದಾರೆ. ಇವರು ತಮ್ಮ ಹರಿತವಾದ ಮಾತುಗಳಿಂದ ಸಮಾಜದ ಅನ್ಯಾಯಗಳನ್ನು, ಕುಂದು ಕೊರತೆಗಳನ್ನು ಯಾವುದೇ ಮುಚ್ಚುಮರೆಯಿಲ್ಲದೆ ಖಂಡಿಸಿದ್ದಾರೆ. ಕನಕದಾಸರ ಕೀರ್ತನೆಗಳಲ್ಲಿ ಸಾಮಾಜಿಕ ಕಳಕಳಿ ಮತ್ತು ಮಾನವೀಯ ಮೌಲ್ಯಗಳ ಮಿಡಿತಗಳಿವೆ. ಇವರ ಕಾವ್ಯಗಳು ಮತ್ತು ಕೀರ್ತನೆಗಳು ಸಾಮಾಜಿಕ ಪರಿವರ್ತನೆಗೆ ದಾರಿದೀಪಗಳಾಗಿವೆ. ಇವುಗಳು ಅಂದಿಗೆ ಮಾತ್ರ ಸೀಮಿತವಾಗದೆ ಇಂದಿಗೂ ಕೂಡ ಪ್ರಸ್ತುತವಾಗಿವೆ. ಇವರ ಕೀರ್ತನೆಗಳ ಒಳ ಮರ್ಮವನ್ನು ಅರಿತುಕೊಳ್ಳುವುದು ಇಂದು ಅಗತ್ಯವಾಗಿದೆ.

**KEYWORDS**: ಕನಕದಾಸರು, ಕೀರ್ತನೆಗಳು, ಸಾಮಾಜಿಕ ಚಿಂತನೆ, ವೈಚಾರಿಕತೆ, ಸಾಮಾಜಿಕ ಪ್ರಜ್ಞೆ, ಜಾತಿ ಪದ್ಧತಿ, ಡಂಭಾಚಾರ, ಧರ್ಮದ ಆಚರಣೆ.

* **ಡಾ. ಜಯದೇವ ಸಿರಳ್ಳಿ,** ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹಾವೇರಿ (ಗಾಂಧಿಪುರ).

**ಪ್ರಸ್ತಾವನೆ:**

ಕನ್ನಡ ನಾಡು ಪ್ರಾಚೀನ ಕಾಲದಿಂದಲೂ ಋಷಿ-ಮುನಿಗಳ, ಸಾಧು-ಸಂತರ ನೆಲೆವೀಡಾಗಿದೆ. ಕನಕದಾಸರು ಸಂತರು, ಹರಿದಾಸರು ಮತ್ತು ಕವಿಗಳಾಗಿದ್ದಾರೆ. ಇವರು ಕರ್ನಾಟಕದ ದಾಸ ಸಾಹಿತ್ಯದ ಅಶ್ವಿನಿ ದೇವತೆಗಳಲ್ಲಿ ಒಬ್ಬರಾಗಿದ್ದು, ದಾಸ ಸಾಹಿತ್ಯದ ಸುವರ್ಣಯುಗದ ಪ್ರವರ್ತಕರಲ್ಲಿ ಒಬ್ಬರಾಗಿದ್ದಾರೆ. ಕನಕದಾಸರು ಯಾವ ಮತವನ್ನು ಬಿಡದೆ, ಯಾವ ಮತಕ್ಕೂ ಅಂಟಿಕೊಳ್ಳದೆ ಸಕಲ ತತ್ವಗಳನ್ನು ಮೀರಿ ವಿಶ್ವಮಾನವರಾಗಿ ವಿಜೃಂಭಿಸಿದ ಯೋಗ ಪುರುಷರು.

ಕನಕದಾಸರು ಈ ನಾಡಿನ ಆಧ್ಯಾತ್ಮಿಕ, ಸಾಂಸ್ಕೃತಿಕ ಹಾಗೂ ಸಾಮಾಜಿಕ ಮೌಲ್ಯಗಳ ಉನ್ನತಿಗೆ ನೀಡಿರುವ ಕೊಡುಗೆ ಅನುಪಮವಾದುದು. ಇವರು ತಮ್ಮ ಕೀರ್ತನೆಗಳಲ್ಲಿ ಅನನ್ಯ ಭಕ್ತಿಯಿಂದ ಭಗವಂತನನ್ನು ಅದರಲ್ಲೂ ಹರಿಯನ್ನು ಕೊಂಡಾಡಿ ದಾಸ ಶ್ರೇಷ್ಠರೆಂದು ಕರೆಸಿಕೊಂಡರು. ಅಲ್ಲದೆ ಇವರು ಮೋಹನತರಂಗಿಣಿ, ನಳಚರಿತ್ರೆ, ಹರಿಭಕ್ತಿಸಾರ ಮತ್ತು ರಾಮಧಾನ್ಯಚರಿತೆಗಳಂತಹ ಉತ್ತಮ ಕಾವ್ಯಗಳನ್ನು ರಚಿಸಿ ಕವಿಶ್ರೇಷ್ಠರೆಂದು ಪ್ರಸಿದ್ಧರಾದರು. ಹುಟ್ಟಿನಿಂದ ಕೆಳವರ್ಗಕ್ಕೆ ಸೇರಿದ ಇವರು ತಮ್ಮ ವಿಶಿಷ್ಟ ಗುಣಗಳಿಂದ ಮತ್ತು ಕಾವ್ಯ ಹಾಗೂ ಕೀರ್ತನೆಗಳ ರಚನೆಯಿಂದ ಗುರುಗಳಾದ ವ್ಯಾಸರಾಯರ ಪ್ರಿಯ ಶಿಷ್ಯರಲ್ಲಿ ಒಬ್ಬರಾಗುವ ಯೋಗ್ಯತೆಯನ್ನು ಗಳಿಸಿಕೊಂಡು 'ದಾಸವರೇಣ್ಯರೆಂಬ' ಗೌರವಕ್ಕೆ ಪಾತ್ರರಾದರು.

**ಕನಕದಾಸರ ಜೀವನ:**

"ಕನಕದಾಸರು ಹಾವೇರಿ ಜಿಲ್ಲೆಯ ಶಿಗ್ಗಾಂವ ತಾಲೂಕಿನ ಬಾಡ ಗ್ರಾಮದಲ್ಲಿ ತಿರುಪತಿ ತಿಮ್ಮಪ್ಪನ ವರಪ್ರಸಾದದಿಂದ ಬೀರಪ್ಪ ಮತ್ತು ಬಚ್ಚಮ್ಮ ದಂಪತಿಗಳ ಮಗನಾಗಿ ಕ್ರಿ. ಶ. 1495 ರಲ್ಲಿ"[1] ಜನಿಸಿದರು. ಕನಕದಾಸರಿಗೆ ತಿಮ್ಮಪ್ಪನೆಂದು ನಾಮಕರಣ ಮಾಡಲಾಗಿತ್ತು. ತಂದೆಯಾದ ಬೀರಪ್ಪನಿಗೆ ಬಾಡ ಮತ್ತು ಬಂಕಾಪುರ ಭಾಗದ ಸುಮಾರು 78 ಗ್ರಾಮಗಳ ನಾಡಗೌಡಿಕೆ ಮತ್ತು ದಂಡನಾಯಕತನವಿತ್ತು. ಈ ಕಾರಣದಿಂದ ಬೀರಪ್ಪನನ್ನು ಬೀರೇಗೌಡ ಎಂದು ಕರೆಯುತ್ತಿದ್ದರು. ತನ್ನ ವೀರತನ, ದಕ್ಷತೆ ಮತ್ತು ಪ್ರಾಮಾಣಿಕತನದಿಂದ ಬೀರಪ್ಪ ವಿಜಯನಗರ ಅರಸರ ವಿಶ್ವಾಸಕ್ಕೆ ಪಾತ್ರನಾಗಿದ್ದನು.

ತಿಮ್ಮಪ್ಪನಿಗೆ ಬಾಲ್ಯದಲ್ಲಿ ಗುರು ಶ್ರೀನಿವಾಸಾಚಾರ್ಯರು ಕುಸ್ತಿ, ಕತ್ತಿವರಸೆ ಮತ್ತು ಯುದ್ಧ ವಿದ್ಯೆಗಳನ್ನು ಕಲಿಸಿಕೊಟ್ಟರು. ಜೊತೆಗೆ ಓದು-ಬರಹ, ಸಾಹಿತ್ಯ-ಸಂಗೀತ, ಶಾಸ್ತ್ರ-ಪುರಾಣ ಇತ್ಯಾದಿಗಳ ಅಭ್ಯಾಸಕ್ಕೂ ವ್ಯವಸ್ಥಿತ ಏರ್ಪಾಡು ಮಾಡಿದರು. ತಿಮ್ಮಪ್ಪನ ಹದಿನೇಳನೆಯ ವರ್ಷದಲ್ಲಿ ಅವರ ತಂದೆ ಬೀರೇಗೌಡರು ತೀರಿಕೊಂಡರು. ನಂತರ ತಿಮ್ಮಪ್ಪನು ತನ್ನ ತಾಯಿಯ ಮಾರ್ಗದರ್ಶನದಲ್ಲಿ ದಂಡನಾಯಕತನದ ಹೊಣೆ ಹೊತ್ತುಕೊಂಡು ಆಡಳಿತ ನಡೆಸಿದರು.

ತಿಮ್ಮಪ್ಪನಾಯಕ ಕನಕನಾಯಕನಾದದ್ದು ಪವಾಡದ ರೀತಿಯಲ್ಲಿ. ಒಮ್ಮೆ ಆಕಸ್ಮಿಕವಾಗಿ ಭೂ ಶೋಧನೆಯನ್ನು ಮಾಡುತ್ತಿದ್ದಾಗ ಅಪಾರ ಧನರಾಶಿಯು

ದೊರೆಯಿತು. ಆಗ ಅವರು ಅದನ್ನು ತನ್ನ ಒಡೆಯರಿಗೆ ಒಪ್ಪಿಸಿದರು. ಆದರೆ ವಿಜಯನಗರ ಅರಸರು ಅವರ ಪ್ರಾಮಾಣಿಕತೆಯನ್ನು ಮೆಚ್ಚಿ, ಈ ಹಣವನ್ನು ನಿನ್ನ ಇಷ್ಟದ ದೇವರ ಕಾರ್ಯಕ್ಕೆ ಖರ್ಚು ಮಾಡು ಎಂದು ಹೇಳಿದರು. ಕನಕದಾಸರು ಆ ಹಣವನ್ನು ತನ್ನ ಪ್ರಿಯ ದೇವರಾದ ಆದಿಕೇಶವನಿಗಾಗಿ ಒಂದು ದೇವಾಲಯ ಕಟ್ಟಿಸಲು ಮತ್ತು ಧರ್ಮಕಾರ್ಯಗಳಿಗೆ ಉಪಯೋಗಿಸಿದರು. ಈ ಕಾರಣದಿಂದ ಜನರು ತಿಮ್ಮಪ್ಪನನ್ನು ಕನಕನೆಂದು ಕರೆದರು. ಹೀಗೆ ತಿಮ್ಮಪ್ಪನಾಯಕ ಕನಕನಾಯಕನಾದನು. ಇವರು ತಮ್ಮ ಆಡಳಿತ ಕಾಲದಲ್ಲಿ ವಿಜಯನಗರ ಸಾಮ್ರಾಜ್ಯದ ಏಳು–ಬೀಳುಗಳನ್ನು ಕಂಡವರು. ಸ್ವತಃ ಕನಕದಾಸರು ಪಾಳೆಯಗಾರರಾಗಿ ಧನಸಂಪತ್ತನ್ನು, ವೈಭವವನ್ನು, ಅಧಿಕಾರವನ್ನು ಅನುಭವಿಸಿದರು. ಆದರೆ ನಂತರದ ತಮ್ಮ ಜೀವನದಲ್ಲಿ ಧನಸಂಪತ್ತು, ವೈಭವ, ಅಧಿಕಾರ ಇವೆಲ್ಲವುಗಳ ನಿಷ್ಪ್ರಯೋಜಕತೆಯನ್ನು, ಅನಿತ್ಯತೆಯನ್ನು ಮನಗಂಡು ಹರಿಗೆ ಶರಣಾಗಿ ಹರಿದಾಸರಾದರು. ವ್ಯಾಸರಾಯರ ಶಿಷ್ಯರಾಗಿ ದೀಕ್ಷೆ ಪಡೆದು ಕನಕದಾಸರಾದರು.

**ಕನಕದಾಸರ ಕೀರ್ತನೆಗಳಲ್ಲಿ ಸಾಮಾಜಿಕ ಮೌಲ್ಯಗಳು:**

ಕನಕದಾಸರು 'ಶ್ರೀಆದಿಕೇಶವನ' ಅಂಕಿತದಲ್ಲಿ ಸುಮಾರು 316 ಕ್ಕೂ ಹೆಚ್ಚು ಕೀರ್ತನೆಗಳನ್ನು ರಚಿಸಿದ್ದಾರೆ. ಈ ಕೀರ್ತನೆಗಳು ಭಾವಪೂರ್ಣವಾಗಿವೆ. ಈ ಕೀರ್ತನೆಗಳ ಮೂಲಕ ಭಗವಂತನಲ್ಲಿ ಭಕ್ತಿಯನ್ನು ಸಾರುವುದರ ಮೂಲಕ ಸಾಮಾಜಿಕ ಮೌಲ್ಯಗಳನ್ನು ಎತ್ತಿ ಹಿಡಿದಿದ್ದಾರೆ. ಸಮಾಜದಲ್ಲಿ ಬೀಡುಬಿಟ್ಟಿರುವ ಅಸಂಪ್ರದಾಯಿಕ ಆಚರಣೆಗಳನ್ನು ಒರೆಗಲ್ಲಿಗೆ ಹಚ್ಚಿ ಪ್ರಶ್ನಿಸಿದ್ದಾರೆ. ಸ್ವಸ್ಥಸಮಾಜದ ನಿರ್ಮಾಣಕ್ಕಾಗಿ ಪ್ರತಿಯೊಬ್ಬರಿಗೂ ಮಾನಸಿಕ ನೆಮ್ಮದಿಯ ಅವಶ್ಯಕತೆ ಇದೆ. ಅದು ಭಗವಂತನ ಧ್ಯಾನದಿಂದ ಮಾತ್ರ ಲಭಿಸುವುದು. ನಾಸ್ತಿಕತೆಯು ಮನುಷ್ಯನಲ್ಲಿ ನಿರಾಸೆಯನ್ನು, ಹತಾಶೆಯನ್ನು, ತಲ್ಲಣವನ್ನು ಮತ್ತು ಭ್ರಮೆಯನ್ನುಂಟು ಮಾಡುತ್ತದೆ. ದೇವರಲ್ಲಿ ಅನನ್ಯಭಕ್ತಿಯನ್ನು ಸಾರುವ, ಬಾಹ್ಯ ಆಚಾರ, ಡಾಂಭಿಕ ಭಕ್ತಿಯನ್ನು ದೂಷಿಸುವ, ಜಾತಿ ಪದ್ಧತಿಯನ್ನು ಖಂಡಿಸುವ, ದಾನ ಧರ್ಮದ ಮೂಲಕ ಸುಖ ಪ್ರಾಪ್ತಿಯಾಗುವುದು; ಇಂತಹ ಸಾಮಾಜಿಕ ಮೌಲ್ಯಗಳನ್ನು ತಮ್ಮ ಕೀರ್ತನೆಗಳ ಮೂಲಕ ವ್ಯಕ್ತಪಡಿಸಿದ್ದಾರೆ. ಅವುಗಳು ಆ ಕಾಲಕ್ಕೆ ಮಾತ್ರವಲ್ಲದೆ ಪ್ರಸ್ತುತ ಕಾಲಕ್ಕೂ ಸಹ ಸಾಮಾಜಿಕ ಪರಿವರ್ತನೆಗೆ ದಾರಿದೀಪವಾಗಿವೆ.

**ಜಾತಿ ಪದ್ಧತಿ ಖಂಡನೆ:**

ಕನಕದಾಸರು ಸಮಾಜದಲ್ಲಿ ಬೀಡು ಬಿಟ್ಟಿರುವ ಜಾತಿ ಪದ್ಧತಿಯನ್ನು ತಮ್ಮ ಕೀರ್ತನೆಗಳಲ್ಲಿ ತೀಕ್ಷ್ಣವಾಗಿ ಖಂಡಿಸಿದ್ದಾರೆ. ಅವರು ಒಮ್ಮೆ ಒಂದು ಹಳ್ಳಿಗೆ ಹೋದಾಗ ಅಲ್ಲಿ ಹಿಂದೂ–ಮುಸಲ್ಮಾನ ಜನಾಂಗಗಳಲ್ಲಿ ಕಲಹವುಂಟಾಗಿತ್ತು. ಆಗ ಅವರು ಮನುಷ್ಯನಿಗೆ ಕುಲ ಮುಖ್ಯವಲ್ಲ, ಕುಲದಿಂದ ಏನನ್ನೂ ಸಾಧಿಸಲು ಸಾಧ್ಯವಿಲ್ಲ, ಅದು ಗುಣದಿಂದ ಮಾತ್ರ ಸಾಧ್ಯ ಎಂದು ತಮ್ಮ ಕೀರ್ತನೆಗಳ ಮೂಲಕ ಸಮಾಜಕ್ಕೆ ತಿಳಿಸುವ ಕೆಲಸ ಮಾಡಿದ್ದಾರೆ.

**“ಕುಲ ಕುಲ ಕುಲವೆಂದು ಹೊಡೆದಾಡದಿರಿ**
**ನಿಮ್ಮ ಕುಲದ ನೆಲೆಯನೇನಾದರೂ ಬಲ್ಲಿರಾ”[2]**

ಕುಲವನ್ನು ಕುರಿತ ಕನಕದಾಸರ ಈ ಪ್ರಶ್ನೆ ವೈಯಕ್ತಿಕ ಪ್ರಶ್ನೆಯಲ್ಲ. ಇದು ಅಲಕ್ಷ್ಯಕ್ಕೊಳಗಾದ ತಳಸಮುದಾಯದ ಪ್ರಶ್ನೆಯಾಗಿದೆ. ಪರಂಪರಾಗತವಾಗಿ ಬಂದ ಅಸಮಾನತೆ, ಅಹಂಕಾರ, ಡಾಂಭಿಕತನಗಳಿಗೆ ಪ್ರತಿರೋಧ ಒಡ್ಡಿದ ಬಗೆಯೂ ಹೌದು. ಹೀಗೆ ಕೆಳಸಮುದಾಯದ ಚರಿತ್ರೆಯನ್ನು ವಿವರಿಸಿಕೊಡುವ ಮೂಲಕ ವರ್ತಮಾನದ ಸಮಸ್ಯೆಗಳನ್ನು ಎದುರಿಸುವ ಬಗೆಯನ್ನು ಮನಗಾಣಿಸಿದ್ದಾರೆ.

**“ಕುಲ ಕುಲ ಕುಲವೆನ್ನುತಿಹರು**
**ಕುಲವಾವುದು ಸತ್ಯ ಸುಖವುಳ್ಳ ಜನರಿಗೆ ॥**
**ಕೆಸರೊಳು ತಾವರೆ ಪುಟ್ಟಲು ಅದ ತಂದು**
**ಬಿಸಜನಾಭನಿಗರ್ಪಿಸರಿಲ್ಲವೆ**
**ಹಸುವಿನ ಮಾಂಸದೊಳುತ್ಪತ್ತಿ ಕ್ಷೀರವ**
**ವಸುಧೆಯೊಳಗೆ ಭುಸುರರುಣಲಿಲ್ಲವೆ ॥**
**ಮೃಗಗಳ ಮೈಯಲಿ ಪುಟ್ಟಿದ ಕತ್ತುರಿಯ**
**ತೆಗೆದು ಪೂಸುವರು ದ್ವಿಜರೆಲ್ಲರು**
**ಬಗೆಯಿಂದ ನಾರಾಯಣನಾವ ಕುಲ**
**ಅಗಜವಲ್ಲಭನ್ಯಾತರ ಕುಲದವನು ॥**
**ಆತ್ಮ ಯಾವ ಕುಲ ಜೀವ ಯಾವ ಕುಲ**
**ತತ್ವೇಂದ್ರಿಯಗಳ ಕುಲ ಪೇಳಿರಯ್ಯ**
**ಆತ್ಮಾಂತರಾತ್ಮ ನೆಲೆಯಾದಿಕೇಶವನು**
**ಆತ್ಮನೊಲಿದ ಮೇಲೆ ಯಾತರ ಕುಲವಯ್ಯ”[3]**

ಮನುಷ್ಯನಿಗೆ ಹುಟ್ಟಿದ ಕುಲ ಮುಖ್ಯವಲ್ಲ, ಗುಣ ಮುಖ್ಯ. ಕೆಸರಿನಲ್ಲಿ ಹುಟ್ಟಿದ ತಾವರೆಯನ್ನು ವಿಷ್ಣುವಿಗೆ ಅರ್ಪಿಸಲಾಗಿದೆ. ಹಸುವಿನ ಕ್ಷೀರವನ್ನು ಭೂಮಿಯ ಮೇಲಿನ ಬ್ರಾಹ್ಮಣರು ಊಟ ಮಾಡುವರು. ಮೃಗಗಳ ಮೈಯಲ್ಲಿರುವ ಕತ್ತುರಿಯಿಂದ ಬ್ರಾಹ್ಮಣರು ಪೂಜಿಸುವರು. ಹೀಗಿರುವಾಗ ಆತ್ಮಕ್ಕೆ, ಜೀವಕ್ಕೆ ಮತ್ತು ಇಂದ್ರಿಯಗಳಿಗೆ ಕುಲ ಯಾವುದು? ಎಂದು, ದೇವನೊಲಿದ ಮೇಲೆ ಯಾವ ಕುಲವಿಲ್ಲವೆಂದು ತಮ್ಮ ಅನುಭವದ ಮೂಲಕ ಸಮಾಜದ ಜನರಿಗೆ ಮಾರ್ಮಿಕವಾಗಿ ಎಚ್ಚರಿಸಿದ ಪರಿಯಿದು.

ಸಮಾಜದಲ್ಲಿರುವ ಎಲ್ಲ ಜಾತಿಗಳು ಅವರವರ ಕುಲಕಸುಬುಗಳಿಂದ ಬಂದಿವೆಯೇ ಹೊರತು ಅವರವರ ಹುಟ್ಟಿನಿಂದಲ್ಲ.

**“ಎಲ್ಲರು ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ ॥**
**ವೇದಶಾಸ್ತ್ರ ಪಂಚಾಂಗವ ಓದಿಕೊಂಡು ಅನ್ಯರಿಗೆ**
**ಬೋಧನೆಯ ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ ॥**
**ಚಂಡ ಭಟರಾಗಿ ನಡೆದು ಕತ್ತಿ ಡಾಲು ಕೈಲಿ ಹಿಡಿದು**

**ಖಂಡ ತುಂಡ ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ ॥**
**ಅಂಗಡಿ ಮುಂಗಟ್ಟನ್ಹೂಡಿ ವ್ಯಂಗ್ಯ ಮಾತುಗಳನ್ನಾಡಿ**
**ಭಂಗ ಬಿದ್ದು ಗಳಿಸುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ ॥**
**ಕುಂಟೆ ತುದಿಗೆ ಕೊರಡು ಹಾಕಿ ಹೆಂಟೆ ಮಣ್ಣು ಸಮನು ಮಾಡಿ**
**ರೆಂಟೆ ಹೊಡೆದು ಬೆಳೆಸುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ ॥**
**ಸನ್ಯಾಸಿ ಜಂಗಮ ಜೋಗಿ ಜಟ್ಟಿ ಮಂಡ ಬೈರಾಗಿ**
**ನಾನಾ ವೇಷಗಳೆಲ್ಲ ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ ॥**
**ಉನ್ನತ ಕಾಗಿನೆಲೆಯಾದಿಕೇಶವನಾ ಧ್ಯಾನವನ್ನು**
**ಮನಮುಟ್ಟಿ ಮಾಡುವುದು ಮುಕ್ತಿಗಾಗಿ ಆನಂದಕ್ಕಾಗಿ''[4]**

ಈ ಕೀರ್ತನೆಯಲ್ಲಿ ಕನಕದಾಸರು ಹೊಟ್ಟೆ ಬಟ್ಟೆಯ ಸಮಸ್ಯೆ ನಿವಾರಣೆಯೇ ಈ ಎಲ್ಲ ವೃತ್ತಿಗಳ ಪರಮ ಧ್ಯೇಯವಾಗಿದೆ ಎಂದು ತಿಳಿಸಿದ್ದಾರೆ. ಈ ವೃತ್ತಿಗಳೇ ಜಾತಿ ಸೂಚಕಗಳಾಗಿವೆಯೇ ಹೊರತು ಹುಟ್ಟಿನಿಂದಲ್ಲ. ಆದರೆ ನಾವು ಹೊಟ್ಟೆ ಬಟ್ಟೆಗಾಗಿ ಮಾಡುವ ವೃತ್ತಿಯಲ್ಲಿ ಆತ್ಮ ಸಂತೃಪ್ತಿಯೂ ಇರಬೇಕು. ಆಗ ಮಾತ್ರ ಮನುಷ್ಯನಿಗೆ ಆನಂದ, ಸಂತೋಷ ದೊರೆಯುತ್ತದೆ.

**ಬಾಹ್ಯ ಆಚಾರ ಮತ್ತು ಡಂಭಾಚಾರದ ಖಂಡನೆ:**

ಮನುಷ್ಯನ ಭಕ್ತಿ ಭಾವವು ಆಂತರಿಕವಾಗಿರಬೇಕೇ ವಿನಃ ಅದು ಬಾಹ್ಯವಾಗಿರಬಾರದು. ಮನದಲ್ಲಿ ಕಪಟ ಹಾಗೂ ಕೆಟ್ಟ ಗುಣಗಳನ್ನು ಇಟ್ಟುಕೊಂಡು ಬರಿ ಜಪ ಮತ್ತು ತಪಸ್ಸು ಮಾಡುವುದರಿಂದ ಯಾವುದೇ ಪ್ರಯೋಜನವಿಲ್ಲ. ಬಾಹ್ಯ ಆಚರಣೆಗಿಂತ ಶುದ್ಧ ಮನಸ್ಸಿನ ಭಕ್ತಿ ಹಾಗೂ ಸದಾಚಾರವೇ ಮುಖ್ಯ ಎಂಬುದು ಕನಕದಾಸರ ಆಶಯವಾಗಿದೆ. ಸಾಧು ಸನ್ಯಾಸಿ, ದಾಸ-ಜಂಗಮ ಮುಂತಾದ ವೇಷಗಳ ಮೂಲಕ ಜಗತ್ತಿನಲ್ಲಿ ನಡೆಯುತ್ತಿರುವ ಕಪಟ ವಂಚನೆಗಳನ್ನು ಕಂಡ ಕನಕದಾಸರು ನಿರ್ದಾಕ್ಷಿಣ್ಯವಾಗಿ ಖಂಡಿಸುತ್ತಾರೆ.

ಮನುಷ್ಯನು ಕೇವಲ ಮೈಯನ್ನು ತೊಳೆದುಕೊಳ್ಳುವುದು, ಬಣ್ಣ ಹಚ್ಚಿಕೊಳ್ಳುವುದು, ಧಾರ್ಮಿಕ ವೇಷ ಧರಿಸಿಕೊಳ್ಳುವುದರಿಂದ ದೇವರನ್ನು ಒಲಿಸಿಕೊಳ್ಳಲಾಗದು ಎಂದು ಪ್ರತಿಪಾದಿಸಿ ಆಂತರಿಕ ಶುದ್ಧತೆ ಹಾಗೂ ನಿಜವಾದ ಭಕ್ತಿಗೆ ಹೆಚ್ಚಿನ ಒತ್ತು ನೀಡಿದ್ದಾರೆ. ಮನುಷ್ಯ ಕೇವಲ ನೀರಿನಲ್ಲಿ ಮಿಂದರೆ ಅಥವಾ ಉಪವಾಸವಿದ್ದರೆ ಸಾಲದು, ಮನಸ್ಸು ಶುದ್ಧವಾಗಿರಬೇಕು ಎಂದು ಸಾರಿದ್ದಾರೆ. ಕನಕದಾಸರು ಕಾಶಿಗೆ ಹೋದಾಗ ಗಂಗಾನದಿಯಲ್ಲಿ ಸ್ನಾನ ಮಾಡುತ್ತಿರುವ ಜನಸಮೂಹವನ್ನು ಕಂಡು-

**''ಸ್ನಾನವ ಮಾಡಿರೊ ಜ್ಞಾನತೀರ್ಥದಲ್ಲಿ**
**ಮಾನವರೆಲ್ಲ ಮೌನದೊಳಗೆ ನಿಂದು ॥**
**ತನ್ನ ತಾನರಿತುಕೊಂಬುದದೆ ಒಂದು ಸ್ನಾನ**
**ಅನ್ಯಾಯ ಮಾಡದಿರುವುದೊಂದು ಸ್ನಾನ**

**ಅನ್ನ ದಾನವ ಮಾಡುವುದೊಂದು ಸ್ನಾನ-ಹರಿ**
**ನಿನ್ನ ಧ್ಯಾನವೆ ನಿತ್ಯ ಗಂಗಾಸ್ನಾನ ॥**
**ಪರಸತಿಯ ಭ್ರಮಿಸದಿದ್ದರೆ ಒಂದು ಸ್ನಾನ**
**ಪರನಿಂದೆಯ ಮಾಡದಿದ್ದರೊಂದು ಸ್ನಾನ**
**ಪರೋಪಕಾರ ಮಾಡುವುದೊಂದು ಸ್ನಾನ**
**ಪರತತ್ವವನರಿತುಕೊಂಬುದೆ ಒಂದು ಸ್ನಾನ ॥**
**ಸಾಧು ಸಜ್ಜನರ ಸಂಗವೆ ಒಂದು ಸ್ನಾನ**
**ಭೇದಾ ಭೇದಾವಳಿದಡೆ ಒಂದು ಸ್ನಾನ**
**ಆದಿ ಮೂರುತಿ ಕಾಗಿನೆಲೆಯಾದಿಕೇಶವನ**
**ಪಾದ ಧ್ಯಾನವೆ ನಿತ್ಯ ಗಂಗಾ ಸ್ನಾನ''**[5]

ಹೀಗೆ ಜನರು ಜ್ಞಾನತೀರ್ಥದಲ್ಲಿ ಸ್ನಾನ ಮಾಡಿದರೆ ಒಳ್ಳೆಯದು ಎಂಬ ಭಾವದ ಈ ಕೀರ್ತನೆಯನ್ನು ಕಟ್ಟಿ ಹಾಡಿದ್ದಾರೆ. ಅಂದರೆ ತೋರಿಕೆಯ ಸ್ನಾನದಿಂದ ದೇವರ ದರುಶನವಾಗುವುದಿಲ್ಲ ಎಂದು ಕೀರ್ತನೆಯಲ್ಲಿ ತಮ್ಮ ಭಾವನೆಯನ್ನು ವ್ಯಕ್ತಪಡಿಸಿದ್ದಾರೆ. ಮನಸ್ಸಿನಲ್ಲಿ ಕಪಟ ಮತ್ತು ಕೆಟ್ಟ ಗುಣಗಳನ್ನು ಇಟ್ಟುಕೊಂಡು ಬರಿ ಬಾಹ್ಯ ಆಚರಣೆಗಳಿಗಾಗಿ ಮಾಡುವ ಜಪ, ತಪ, ವೇದ ಅಧ್ಯಯನ ವ್ಯರ್ಥ ಎಂದಿದ್ದಾರೆ.

**''ಜಪವ ಮಾಡಿದರೇನು ತಪವ ಮಾಡಿದರೇನು**
**ವಿಪರೀತ ಕಪಟಗುಣ ಕಲುಷವಿದ್ದವರು ॥**
**ಆದಿ ಗುರುವರಿಯದೆ ಅತ್ತಲಿತ್ತಲು ತೊಳಳಿ**
**ವೇದಶಾಸ್ತ್ರವನೊದಿ ಬಾಯಾರಲು**
**ಹಾದಿಯನು ಕಾಣದಂತಿರುತಿರ್ದು ಹಲವೆಂಟು**
**ವಾದ ತರ್ಕದೊಳಿದ್ದ ಭೇದವಾದಿಗಳು ॥**
**ಚಳಿ ಮಳೆಯ ಅತಿಕಾರುಕಗ್ಗತ್ತಲೆಯೊಳಗೆ ಎದ್ದು**
**ಹೊಳೆಯೊಳಗೆ ಮುಳುಗಿ ಜಪ ತಪವ ಮಾಡಿ**
**ಕಳವಳಿಸಿ ನೂರೆಂಟು ಧರ್ಮವನು ಆಚರಿಸೆ**
**ಒಲಿಯದಣ್ಣ ಆದಿಕೇಶವ ಕಾಗಿನೆಲೆಯ''**[6]

ಮನುಷ್ಯನು ಮನಸ್ಸಿನಲ್ಲಿ ಕಲ್ಮಶವಿಟ್ಟುಕೊಂಡು ಮಾಡುವ ಜಪ-ತಪಗಳಿಂದ ಯಾವುದೇ ಪ್ರಯೋಜನವಿಲ್ಲ. ಹಾಗೆಯೇ ನಿಜವಾದ ಉದ್ದೇಶವನ್ನು ತಿಳಿಯದೆ ವೇದ-ಶಾಸ್ತ್ರಗಳನ್ನು ಓದಿ ಬಾಯಾರಿದರೂ ಯಾವುದೇ ಸತ್ಫಲ ದೊರೆಯುವುದಿಲ್ಲ ಎಂದಿದ್ದಾರೆ. ಹಾಗೆಯೇ ಚಳಿ ಮಳೆಯೆನ್ನದೆ ನದಿಯಲ್ಲಿ ಮುಳುಗಿ ಸ್ನಾನ ಮಾಡಿ ಹಲುಬಿಕೊಂಡರೂ ಅಂತರಂಗ ಶುದ್ಧವಿಲ್ಲದಿದ್ದರೆ ಭಕ್ತಿಯ ಸತ್ಫಲ ದೊರೆಯುವುದಿಲ್ಲ ಎಂದಿದ್ದಾರೆ.

**ಧರ್ಮದ ಆಚರಣೆ:**

ಕನಕದಾಸರು ಸುಸಂಸ್ಕೃತ ಸಮಾಜದ ನಿರ್ಮಿತಿಗೆ ಧರ್ಮಾಚರಣೆಯ ಅಗತ್ಯತೆಯನ್ನು ಒತ್ತಿ ಹೇಳಿದ್ದಾರೆ. ಧರ್ಮಾಚರಣೆಯು ಬಾಹ್ಯ ಆಚಾರ ವಿಚಾರಗಳಿಗಿಂತ ನೈತಿಕತೆ, ಆಂತರಿಕ ಶುದ್ಧತೆ ಹಾಗೂ ಮಾನವೀಯತೆಗೆ ಹೆಚ್ಚು ಒತ್ತು ನೀಡಿದ್ದಾರೆ. ಸಮಾಜದಲ್ಲಿ ಸತ್ಯ ಧರ್ಮಗಳು ಮಾಯವಾಗುತ್ತಿರುವುದನ್ನು ನೋಡಿ ಮರುಗಿದ್ದಾರೆ.

**''ಧರ್ಮವಿಲ್ಲದ ಅರಸು ಮುರಿದ ಕಾಲಿನ ಹೊರಸು**
**ನಿರ್ಮಲವಿಲ್ಲದ ಮನಸ್ಸು ಅದು ಕಜ್ಜಿ ತಿನಿಸು**
**ಶರ್ಮವಿಲ್ಲದ ಗಂಡು ಕರಿಯ ಒನಕೆಯ ತುಂಡು**
**ಧರ್ಮವಿಲ್ಲದ ಮಾತು ಒಡಕು ಮಡಕೆ ತೂತು''**[7]

ಎಂದು ರಾಜನಾದವನು ಧರ್ಮದಿಂದ ರಾಜ್ಯವನ್ನು ಆಳಬೇಕು. ಒಂದು ವೇಳೆ ಅಧರ್ಮದಿಂದ ರಾಜ್ಯವನ್ನು ಆಳಿದರೆ, ಮನಸ್ಸು ನಿರ್ಮಲವಿಲ್ಲದಿದ್ದರೆ, ಆನಂದವಿಲ್ಲದ ಗಂಡಸು, ಗುಟ್ಟು ಇಲ್ಲದ ಮಾತು ಹೇಗಾಗುತ್ತದೋ ಅದೇ ರೀತಿ ಅಧರ್ಮದಿಂದ ನಡೆದುಕೊಳ್ಳುವವರ ಸ್ಥಿತಿಯು ಅದೇ ರೀತಿಯಾಗುತ್ತದೆ ಎಂದು ಹೇಳಿರುವುದನ್ನು ಕಾಣುತ್ತೇವೆ.

ಸಮಾಜದಲ್ಲಿ ಇಂದು ಸತ್ಯ ಧರ್ಮಗಳು ಮಾಯವಾಗಿ ಅಸತ್ಯ ಮತ್ತು ಅಧರ್ಮಗಳು ತಾಂಡವವಾಡುತ್ತಿವೆ. ಇದರಿಂದ ಮನುಷ್ಯನು ತಾಳ್ಮೆಯಿಂದ ಜೀವಿಸಲು ಸಾಧ್ಯವಿಲ್ಲ ಎಂಬುದನ್ನು ಕೀರ್ತನೆಯ ಮೂಲಕ ಸಮಾಜಕ್ಕೆ ತಿಳಿಸಲು ಪ್ರಯತ್ನಿಸಿದ್ದಾರೆ. ಸತ್ಯ, ಸಮಾನತೆ ಹಾಗೂ ಭಗವಂತನಲ್ಲಿ ಇಡುವ ನಿಷ್ಕಲ್ಮಶ ಭಕ್ತಿಯೇ ನಿಜವಾದ ಧರ್ಮವೆಂದು ಜಗತ್ತಿಗೆ ಸಾರಿದ್ದಾರೆ.

**''ಸತ್ಯ ಧರ್ಮಗಳೆಲ್ಲ ಎತ್ತ ಪೋದವೊ ಕಾಣೆ**
**ಉತ್ತಮರ ಜೀವನಕೆ ದಾರಿಯಿಲ್ಲ**
**ನಿತ್ಯದಲಿ ಕಳವು ವ್ಯಭಿಚಾರವುಳ್ಳವರೆಲ್ಲ**
**ಅರ್ಥ ಸಂಪನ್ನರಾಗನುಭವಿಸುತಿಹರು''**[8]

ಕನಕದಾಸರು ಸಮಾಜದ ಒಳಿತಿಗೆ ಧರ್ಮ ಆಚರಣೆಯ ಅಗತ್ಯತೆಯನ್ನು ಕುರಿತು ತಿಳಿಸಿದ್ದಾರೆ. ಸಮಾಜದಲ್ಲಿ ಇಂದು ಸತ್ಯ ಧರ್ಮಗಳು ಮಾಯವಾಗಿವೆ. ಐಶ್ವರ್ಯ ಸಂಪತ್ತಿನ ಅಮಲಿನಲ್ಲಿ ಜನ ನೀತಿ ನಿಯಮಗಳನ್ನು ಗಾಳಿಗೆ ತೂರಿ ಮೂಗುದಾರವಿಲ್ಲದ ಗೂಳಿಯಂತೆ ಬದುಕ ಬಯಸಿದ ಸಮಾಜದ ಸ್ಥಿತ್ಯಂತರವನ್ನು ಕಂಡು ಮರುಗಿದ್ದಾರೆ. ಕನಕದಾಸರು ಸುಸಂಸ್ಕೃತ ಮಾನವನ ನೀತಿನಿಯಮಗಳನ್ನು ಮಾರ್ಮಿಕವಾಗಿ ತಿಳಿಸಿದ್ದಾರೆ.

**''ಸತ್ಯವಂತರ ಸಂಗವಿರಲು ತೀರ್ಥವ್ಯಾತಕೆ**
**ನಿತ್ಯ ಜ್ಞಾನಿಯಾದ ಮೇಲೆ ಚಿಂತೆಯಾತಕೆ ||**

**ತಾನು ಉಣ್ಣದ ಪರರಿಗಿಕ್ಕದ ಧನವ್ಯಾತಕೆ**
**ಮಾನ ಹೀನನಾಗಿ ಬಾಳ್ವ ಮನುಜನ್ಯಾತಕೆ**
**ಜ್ಞಾನವಿಲ್ಲದೆ ನೂರುಕಾಲ ಬದುಕಲ್ಯಾತಕೆ**
**ಮಾನಿನಿಯ ತೊರೆದ ಮೇಲೆ ಭೋಗವ್ಯಾತಕೆ ॥**
**ಮಾತು ಕೇಳದ ಮಲೆತು ನಡೆವ ಮಕ್ಕಳಾತಕೆ**
**ಪ್ರೀತಿಯಿಲ್ಲದೆ ಎಡೆಯಲಿಕ್ಕದ ಅನ್ನವ್ಯಾತಕೆ**
**ನೀತಿಯರಿತು ನಡೆಯದಿರುವ ಬಂಟನ್ಯಾತಕೆ**
**ಸೋತ ಹೆಣ್ಣಿಗೆ ಓತು ನಡೆಯದ ಪುರುಷನಾತಕೆ ॥**
**ಸನ್ನೆಯರಿತು ನಡೆಯದಿರುವ ಸತಿಯು ಯಾತಕೆ**
**ಮನ್ನಣೆಯಿಂದ ನಡೆಸದಿರುವ ದೊರೆಯು ಯಾತಕೆ**
**ಮುನ್ನ ಕೊಟ್ಟು ಪಡೆಯದಿನ್ನು ಬಯಸಲ್ಯಾತಕೆ**
**ಚೆನ್ನ ಆದಿಕೇಶವನಲ್ಲದ ದೈವವ್ಯಾತಕೆ''[9]**

ಮನುಷ್ಯನು ಪ್ರೀತಿಯಿಂದ ಒಲ್ಲದ್ದನ್ನು ಅಲ್ಲಗಳೆಯುತ್ತಾ, ಬೇಕಾಗಿರುವುದನ್ನು ಪ್ರೀತಿಯಿಂದ ಸ್ವೀಕರಿಸುತ್ತಾ ನಡೆದಾಗ ಮಾತ್ರ ಸುಸಂಸ್ಕೃತ ಜೀವನವನ್ನು ದೇವರು ಮೆಚ್ಚುವಂತೆ ನಡೆಸಲು ಸಾಧ್ಯ ಎಂಬುದನ್ನು ಕನಕದಾಸರು ಸ್ಪಷ್ಟೋಕ್ತಿಗಳ ಮೂಲಕ ಉದಾಹರಿಸಿದ್ದಾರೆ.

**ದಾನದ ವಿಚಾರ:**

ಕನಕದಾಸರು ನಾವು ಕೊಡುವ ದಾನವು ಹೇಗಿರಬೇಕು ಎಂಬುದು ತಮ್ಮ ಕೀರ್ತನೆಗಳಲ್ಲಿ ನಿದರ್ಶನಗಳೊಂದಿಗೆ ಹೇಳಿದ್ದಾರೆ. ದಾನ ಎಂಬುದು ಕೇವಲ ಹಣದ ಅಥವಾ ಭೌತಿಕ ವಸ್ತುಗಳ ಕೊಡುಗೆಯಲ್ಲ. ಅದು ನಿಷ್ಕಾಮ ಮನಸ್ಸಿನಿಂದ ಮತ್ತು ದಯೆ, ಸಮಾನತೆಯ ಭಾವದಿಂದ ಹಸಿವಿನಿಂದ ಬಳಲುತ್ತಿರುವವರಿಗೆ ಹಾಗೂ ಅರ್ಹರಿಗೆ ಮಾಡುವ ಸಾತ್ವಿಕ ಸೇವೆಯಾಗಿದೆ. ಅಹಂಕಾರವಿಲ್ಲದ ದಾನವೇ ನಿಜವಾದ ಭಕ್ತಿ ಎಂದು ಕೀರ್ತನೆಗಳಲ್ಲಿ ತಿಳಿಸಿದ್ದಾರೆ.

**''ನುಡಿ ನಡೆವ ಕಾಲದಲ್ಲಿ ದಾನ ಮಾಡದೆ**
**ಇರಲು ಅಡವಿಯೊಳು ಕೆರೆ ತುಂಬಿ ಬತ್ತಿದಂತೆ**
**ಮಡದಿ ಮಕ್ಕಳಿಗೆಂದು ಒಡವೆ ವಸ್ತ್ರವ**
**ಗಳಿಸಿಹಿಡಿಯಲಾ ಯಮನವರ ಕಟ್ಟಿಗೊಳಗಾಗಿ''[10]**

ಮಾತಿನಂತೆ ನಡೆದುಕೊಳ್ಳದೆ, ದಾನ ಮಾಡದ ಜೀವನವು ಅಡವಿಯಲ್ಲಿ ತುಂಬಿದ ಕೆರೆ ಬತ್ತಿದಂತೆ. ಮಡದಿ ಮಕ್ಕಳಿಗೆಂದು ಗಳಿಸಿದ ವಸ್ತ್ರವಡವೆಗಳು ಯಮನು ಬಂದಾಗ ಯಾವುದು ಜೊತೆಯಲ್ಲಿ ಬರುವುದಿಲ್ಲ. ಆದ್ದರಿಂದ ಮನುಷ್ಯನು ದಾನ ಧರ್ಮ ಮಾಡಿ ಸಜ್ಜನರ ಮಾರ್ಗದಲ್ಲಿ ನಡೆಯಬೇಕು. ಆಗ ಜೀವನವು ಸಾರ್ಥಕತೆ ಪಡೆದುಕೊಳ್ಳುತ್ತದೆ ಎಂದಿದ್ದಾರೆ.

**''ಮಾಡು ದಾನ ಧರ್ಮ ಪರ ಉಪಕಾರವ ಮರೆಯದಿರೆಚ್ಚರಿಕೆ**

**ಕೇಡು ನೆನೆಯಬೇಡ ನಂಬಿದವರ ಮೇಲೆ ಕೆಡುವೆ ನೀನೆಚ್ಚರಿಕೆ ॥**
**ಬಾಳು ಬದುಕು ಸಿರಿ ಇರುವಾಗ ಬಂಧು ಬಳಗಗಳೆಚ್ಚರಿಕೆ**
**ಹಾಳು ಸಂಸಾರಕ್ಕೆ ಹಲವರ ಬಾಯ್ಗಳ ಬಡಿಯದಿರೆಚ್ಚರಿಕೆ ॥**
**ಚೆನ್ನಾಗಿ ಬದುಕಿದೆ ಗಳಿಸಿದೆ ನಾನೆಂಬ ಹೆಮ್ಮೆ ಬೇಡೆಚ್ಚರಿಕೆ**
**ನಿನ್ನಾಯು ಮುಗಿಯಲು ಯಮದೂತರು ಬಂದು ಎಳೆಯುವರೆಚ್ಚರಿಕೆ ॥**
**ಕಾಲನ ದೂತರು ಯಾವಾಗ ಎಳೆವರೊ ಕಾಣದು ಎಚ್ಚರಿಕೆ**
**ಬೇಲೂರು ಪುರವಾಸ ನೆಲೆಯಾದಿಕೇಶವನಾಳಾಗು ಎಚ್ಚರಿಕೆ"**[11]

ಕನಕದಾಸರು ಈ ತತ್ವಪದದಲ್ಲಿ ದಾನ, ಸತ್ಸಂಗ ಮತ್ತು ಭಗವಂತನ ಭಕ್ತಿಯ ಮೂಲಕ ಸನ್ಮಾರ್ಗದಲ್ಲಿ ನಡೆಯಲು ಕರೆ ನೀಡುತ್ತಾರೆ. ಲೌಕಿಕ ಜೀವನದಲ್ಲಿ ಅಹಂಕಾರವನ್ನು ತ್ಯಜಿಸಿ, ನಿರಂತರ ಶ್ರೀಹರಿಯ ಆರಾಧನೆ ಮಾಡುವಂತೆ ಕರೆ ನೀಡಿದ್ದಾರೆ.

**"ದಾನಧರ್ಮವ ಮಾಡಿ ಸುಖಿಯಾಗು ಮನವೆ**
**ಹೀನ ವೃತ್ತಿಯಲಿ ನೀ ಕೆಡಬೇಡ ಮನವೆ ॥**
**ದಾನ ಧರ್ಮ ಪರೋಪಕಾರವ ಮಾಡು**
**ದೀನನಾಗಿ ನೀ ಕೆಡಬೇಡವೊ**
**ಜ್ಞಾನವಿಲ್ಲದೆ ಹೀನ ದೈವವ ಭಜಿಸಿದರೆ**
**ಏನುಂಟು ನಿನಗಿನ್ನು ಎಲೆ ಹುಚ್ಚು ಮನವೆ"**[12]

ಮನುಷ್ಯನು ತಾನು ಗಳಿಸಿದ್ದನ್ನು ತನ್ನಲ್ಲಿ ಇಟ್ಟುಕೊಳ್ಳದೆ ಅದರಲ್ಲಿ ಸ್ವಲ್ಪ ಭಾಗವನ್ನು ಇತರರಿಗೆ ದಾನ ಮಾಡಬೇಕು. ಹೀನ ದೈವಗಳಿಗೆ ಬಲಿ ಕೊಡಲು ವೆಚ್ಚ ಮಾಡದೆ, ಜ್ಞಾನಿಯಾಗಿ ಸಾತ್ವಿಕ ಮಾರ್ಗದಲ್ಲಿ ಬದುಕುವುದರಿಂದ ಶಾಂತಿ ಲಭಿಸುತ್ತದೆ ಎಂದು ಹೇಳಿದ್ದಾರೆ.

**"ಏನು ಇಲ್ಲದ ಎರಡು ದಿನದ ಸಂಸಾರ**
**ಜ್ಞಾನದಲಿ ದಾನಧರ್ಮವ ಮಾಡಿರಯ್ಯ ॥**
**ಹಸಿದು ಬಂದವರಿಗೆ ಅಶನವೀಯಲು ಬೇಕು**
**ಶಿಶುವಿಗೆ ಹಾಲ್ಬೆಣ್ಣೆಯನುಣಿಸಬೇಕು**
**ಹಸನಾದ ಭೂಮಿಯನು ಧಾರೆಯೆರೆಯಲು ಬೇಕು**
**ಪುಸಿಯಾಡದಲೆ ಭಾಷೆ ನಡೆಸಲೇ ಬೇಕು"**[13]

ಅನಿತ್ಯವಾದ ಜೀವನದಲ್ಲಿ ಸ್ವಹಿತಕ್ಕಾಗಿ ಗಂಟು ಬೀಳದೆ ಪರಹಿತದಲ್ಲಿ ಪರಮಾತ್ಮನ ಕೃಪೆಗೆ ಪಾತ್ರರಾಗಬೇಕು. ಇಂದು ನಾವು ಸುಖ ಜೀವನವನ್ನು ಅನುಭವಿಸುತ್ತಿದ್ದೇವೆಂದರೆ ಅದಕ್ಕೆ ಹಿಂದಿನ ಜನ್ಮದ ಪುಣ್ಯದ ಫಲವಾಗಿದೆ. ಹಾಗಾಗಿ ನಾವು ಗಳಿಸಿದ ಸಂಪತ್ತನ್ನು ಅಸಹಾಯಕರಿಗೆ ದಾನ ಮಾಡಿದರೆ ಮುಂದೆಯೂ ಸುಖವಾಗಿರಬಹುದೆಂದು ದಾನದ ಮಹತ್ವವನ್ನು ಕನಕದಾಸರು ತಿಳಿಸಿದ್ದಾರೆ.

**ಸಮಾರೋಪ:**

ಕನಕದಾಸರು ತೊಂಬತ್ತು ವರ್ಷಗಳ ಕಾಲ ಸುದೀರ್ಘ ಜೀವನವನ್ನು ನಡೆಸಿದವರು. ಅವರು ರಚಿಸಿದ ಕೀರ್ತನೆಗಳು ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಅನರ್ಘ್ಯ ಮಾಣಿಕ್ಯಗಳಾಗಿವೆ. ಅವರ ಕೀರ್ತನೆಗಳು ಜಾತಿ–ಮತಗಳ ಹಂಗಿಲ್ಲದೆ ಮಾನವೀಯತೆಯೇ ಶ್ರೇಷ್ಠ ಎಂಬ ಅವರ ತತ್ವವನ್ನು ಎತ್ತಿ ಹಿಡಿಯುತ್ತವೆ. ನಿತ್ಯನೂತನತೆಯಿಂದ ಕೂಡಿರುವ ಅವರ ಕೀರ್ತನೆಗಳು ಸಮಾಜದಲ್ಲಿ ಸಮಾನತೆ ಮತ್ತು ಸೌಹಾರ್ದತೆಯನ್ನು ಮೂಡಿಸಲು ಅಂದು ಮತ್ತು ಇಂದಿಗೂ ಕೂಡ ಮಾರ್ಗದರ್ಶಕಗಳಾಗಿವೆ ಹಾಗೂ ದಾರಿದೀಪಗಳಾಗಿವೆ.

**ಕೊನೆ ಟಿಪ್ಪಣಿಗಳು:**

1. ರುದ್ರಪ್ಪ ತಳವಾರ, (2001), ಕನಕದಾಸರ ಕೀರ್ತನೆಗಳು ಮತ್ತು ಲಘು ಕೃತಿಗಳು ಒಂದು ಅಧ್ಯಯನ, ಧಾರವಾಡ: ಕರ್ನಾಟಕ ವಿಶ್ವವಿದ್ಯಾಲಯ (ಕ. ವಿ. ವಿ), ಪು.ಸಂ. 64.
2. ಚಿಕ್ಕಣ್ಣ ಕಾ. ತ. (ಸಂ.), (2015), ಕನಕ ಓದು, ಬೆಂಗಳೂರು: ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನ ಕೇಂದ್ರ, ಪು.ಸಂ. 102.
3. ಅದೇ, ಪು.ಸಂ. 57–58.
4. ಸುಧಾಕರ (ಸಂ.), (2012), ಕನಕದಾಸರ ಕೀರ್ತನೆಗಳು ಮತ್ತು ಮಂಡಿಗೆಗಳು, ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಪು.ಸಂ. 434.
5. ಅದೇ, ಪು.ಸಂ. 461.
6. ಅದೇ, ಪು.ಸಂ. 462.
7. ಅದೇ, ಪು.ಸಂ. 437.
8. ಅದೇ, ಪು.ಸಂ. 474.
9. ಚಿಕ್ಕಣ್ಣ ಕಾ. ತ. (ಸಂ.), (2015), ಕನಕ ಓದು, ಬೆಂಗಳೂರು: ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನ ಕೇಂದ್ರ, ಪು.ಸಂ. 65–66.
10. ಸುಧಾಕರ (ಸಂ.), (2012), ಕನಕದಾಸರ ಕೀರ್ತನೆಗಳು ಮತ್ತು ಮಂಡಿಗೆಗಳು, ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಪು.ಸಂ. 474.
11. ಅದೇ, ಪು.ಸಂ. 453.
12. ಅದೇ, ಪು.ಸಂ. 455.
13. ಅದೇ, ಪು.ಸಂ. 428.

## ಪರಾಮರ್ಶನ ಗ್ರಂಥಗಳು:

1. ಸುಧಾಕರ (ಸಂ), (2012), ಕನಕದಾಸರ ಕೀರ್ತನೆಗಳು ಮತ್ತು ಮಂಡಿಗೆಗಳು, ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ.
2. ಚಿಕ್ಕಣ್ಣ ಕಾ. ತ. (ಸಂ), (2015), ಕನಕ ಓದು, ಬೆಂಗಳೂರು: ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನ ಕೇಂದ್ರ.
3. ರುದ್ರಪ್ಪ ತಳವಾರ, (2001), ಕನಕದಾಸರ ಕೀರ್ತನೆಗಳು ಮತ್ತು ಲಘು ಕೃತಿಗಳು ಒಂದು ಅಧ್ಯಯನ, ಧಾರವಾಡ: ಕರ್ನಾಟಕ ವಿಶ್ವವಿದ್ಯಾಲಯ (ಕ. ವಿ. ವಿ).
4. ವಾಲಿ ಎ. ಸಿ., (2018), ಶಿಶುನಾಳಧೀಶ, ಬಂಡಿವಾಡ: ಆಧ್ಯಾತ್ಮ ಟ್ರಸ್ಟ್.
5. ಪ. ಪೂ. ಶ್ರೀ ಶ್ರೀಧರ ಗಂಗಾಧರ ಮುರಾಳೆ ಶಿವಯೋಗಿಗಳು, (2019), ಶ್ರೀ ಶರೀಫರ ನೂರೊಂದು ತತ್ವಪದಗಳ ಭಾವಾರ್ಥ ದೀಪಿಕೆ, ಶಿಶುವಿನಾಳ: ಪಂಚಾಗ್ನಿಮಠ ಟ್ರಸ್ಟ್.
6. ಚನ್ನಕ್ಕ ಪಾವಟೆ, (2003), ಶಾಸನ ಸಂಜೀವಿನಿ, ಧಾರವಾಡ: ಚನ್ನಗಂಗಾ ಪ್ರಕಾಶನ.
7. ಪಾಟೀಲ ಭೋಜರಾಜ, (1995), ನಾಗರಖಂಡ–70 ಒಂದು ಅಧ್ಯಯನ, ಆನಂದಪುರಂ.
8. ಚನ್ನಪ್ಪ ಉತ್ತಂಗಿ (ಸಂ), (1999), ಸರ್ವಜ್ಞನ ವಚನಗಳು, ಬೆಂಗಳೂರು: ಪ್ರಕಾಶ ಸಾಹಿತ್ಯ.
9. ಬಸವರಾಜ ಎಲ್. (ಸಂ), (2012), ಸರ್ವಜ್ಞನ ವಚನಗಳು, ಮೈಸೂರು: ಗೀತಾ ಬುಕ್ ಹೌಸ್.